# ತೋಟಗಾರಿಕೆ ಇಲಾಖೆಯಲ್ಲಿರುವ ಕ್ಷೇತ್ರ ಮತ್ತು ನರ್ಸರಿಗಳ ಸಂಕ್ಷಿಪ್ತ ವಿವರ

ತೋಟಗಾರಿಕೆ ಇಲಾಖೆಯಲ್ಲಿ 237 ರಾಜ್ಯ ವಲಯ ಮತ್ತು 173 ಜಿಲ್ಲಾವಲಯ ಒಟ್ಟು 410 ಕ್ಷೇತ್ರ ಮತ್ತು ನರ್ಸರಿಗಳಿದ್ದು ಇವುಗಳ ಒಟ್ಟಾರೆ ವಿಸ್ತೀರ್ಣ 15,732.29 ಎಕರೆಗಳಿರುತ್ತದೆ. ಈ ಕ್ಷೇತ್ರ /ನರ್ಸರಿಗಳು 0.03 ಎಕರೆಯಿಂದ 1235.09 ಎಕರೆ ಪ್ರದೇಶವನ್ನು ಹೊಂದಿರುತ್ತವೆ.

- 0.03 ಎಕರೆಯಿಂದ 100 ಎಕರೆವರೆಗೂ ವಿಸ್ತೀರ್ಣ ಹೊಂದಿರುವ ಒಟ್ಟು 377 ಕ್ಷೇತ್ರಗಳಿರುತ್ತವೆ.
- 100 ಎಕರೆಯಿಂದ 300 ಎಕರೆವರೆಗೂ ವಿಸ್ತೀರ್ಣ ಹೊಂದಿರುವ ಒಟ್ಟು 24 ಕ್ಷೇತ್ರಗಳಿರುತ್ತವೆ.
- 300 ಎಕರೆಯಿಂದ 500 ಎಕರೆವರೆಗೂ ವಿಸ್ತೀರ್ಣ ಹೊಂದಿರುವ ಒಟ್ಟು 5 ಕ್ಷೇತ್ರಗಳಿರುತ್ತವೆ.
  - 300 ಎಕರೆ ಚಿಕ್ಕದಾಸರ ಹಳ್ಳಿ ಗೋಡಂಬಿ ಕ್ಷೇತ್ರ, ಚಿಕ್ಕಬಳ್ಳಾಪುರ ಜಿಲ್ಲೆ,
  - 300 ಎಕರೆ ಚಾರ್ಮಾಡಿ ಕ್ಷೇತ್ರ, ಮಂಗಳೂರು ಜಿಲ್ಲೆ
  - 352.33 ಎಕರೆ ಸೋಮನಹಳ್ಳಿಕಾವಲ್ ಕ್ಷೇತ್ರ, ಹಾಸನ ಜಿಲ್ಲೆ,
  - 366.30 ಎಕರೆ ರೇಖುಳಗಿ ಕ್ಷೇತ್ರ, ಬೀದರ್ ಜಿಲ್ಲೆ
  - 375.18ಎಕರೆ ಹೊಗಳಗೆರೆ ಕ್ಷೇತ್ರ, ಕೋಲಾರ ಜಿಲ್ಲೆ,
- 500 ಎಕರೆಯಿಂದ 1000 ಎಕರೆವರೆಗೂ ವಿಸ್ತೀರ್ಣ ಹೊಂದಿರುವ 2 ಕ್ಷೇತ್ರಗಳಿರುತ್ತವೆ.
  - 550 ಎಕರೆ ರಂಗಸ್ವಾಮಿಗುಡ್ಡ ಕ್ಷೇತ್ರ, ತುಮಕೂರು ಜಿಲ್ಲೆ
  - 887.22ಎಕರೆ ಮಲ್ಲಸಂದ್ರ ಕಾವಲ್ ಕ್ಷೇತ್ರ ಮಂಡ್ಯ ಜಿಲ್ಲೆ
- 1000 ಎಕರೆಯಿಂದ 1235.09 ಎಕರೆವರೆಗೂ ವಿಸ್ತೀರ್ಣ ಹೊಂದಿರುವ 2 ಕ್ಷೇತ್ರಗಳಿರುತ್ತವೆ.
  - 1075 ಎಕರೆ ಡಾ:ಎಂ.ಹೆಚ್. ಮರೀಗೌಡ ಕ್ಷೇತ್ರ, ದೊಡ್ಡಸಾಗ್ಗೆರೆ, ತುಮಕೂರು ಜಿಲ್ಲೆ
  - 1235.09 ಎಕರೆ ಧರ್ಮವೀರ ಕ್ಷೇತ್ರ, ತುಮಕೂರು ಜಿಲ್ಲೆ

**ತೋಟಗಾರಿಕೆ ಕ್ಷೇತ್ರಗಳು:-**

ಕ್ಷೇತ್ರಗಳು ಹೆಚ್ಚು ವಿಸ್ತೀರ್ಣವನ್ನು ಹೊಂದಿರುತ್ತವೆ. ಕ್ಷೇತ್ರಗಳಲ್ಲಿ ಮುಖ್ಯವಾಗಿ ವಿವಿದ ತೋಟಗಾರಿಕೆ ಬೆಳೆಗಳಾದ ಹಣ್ಣಿನ ಗಿಡಗಳು (ಸಪೋಟ, ಮಾವು, ನೇರಳೆ, ಹಲಸು, ಸೀತಾಫಲ) ಹೂವಿನ ಗಿಡಗಳು, ತೋಟದ ಬೆಳೆಗಳು (ತೆಂಗು, ಅಡಿಕೆ, ಕಾಳು ಮೆಣಸು, ವೀಳ್ಯಾದೆಲೆ, ಕೋಕೊ,ಗೋಡಂಬಿ, ತಾಳೆ, ಇತರೆ), ಔಷದೀಯ ಹಾಗೂ ಸುಗಂದಿತ ಬೆಳೆಗಳ ತಾಕುಗಳನ್ನು ಹೆಚ್ಚು ವಿಸ್ತೀರ್ಣದಲ್ಲಿ ಬೆಳೆಸಲಾಗುತ್ತಿದೆ. ಈ ಬೆಳೆಗಳ ಫಸಲುಗಳಿಂದ ಆದಾಯವನ್ನು ಪಡೆಯಲಾಗಿ ುತ್ತಿದೆ.

ಕ್ಷೇತ್ರಗಳಲ್ಲಿ ಇಲಾಖಾ ಅಧಿಕಾರಿಗಳ ಕಛೇರಿ ಕಟ್ಟಡಗಳು, ಮೂಲಭೂತ ಸೌಕರ್ಯಗಳಾದ ಹಸಿರು ಮನೆ, ನೆರಳು ಪರದೆ, ದಾಸ್ತಾನು ಸಂಗ್ರಹಣಾ ಕೊಠಡಿ/ಉಗ್ರಾಣ, ಕೊಳವೆ ಬಾವಿ, ತೆರೆದ ಬಾವಿ, ಕಲ್ಲು ಕಂಬದ ಮುಳ್ಳು ತಂತಿ ಬೇಲಿ, ಕಾಂಪೌಂಡ್ ಗೋಡೆ, ನೀರಿನ ತೊಟ್ಟಿ, ಕೃಷಿ ಹೊಂಡ, ಮಳೆ ನೀರು ಸಂಗ್ರಹಣಾ ಘಟಕಗಳು, ಎರೆಹುಳು ಘಟಕ, ಬಯೋಡೈಜೆಸ್ಟರ್ ಘಟಕಗಳನ್ನು ಅಭಿವೃದ್ಧಿ ಪಡಿಸಲಾಗಿರುತ್ತಿದೆ.

ಕ್ಷೇತ್ರಗಳಲ್ಲಿ ಸಾರ್ವಜನಿಕರು/ ರೈತರನ್ನು ಉತ್ತೇಜಿಸಲು ಹೊಸ ತಾಂತ್ರಿಕತೆ ಅಳವಡಿಸಿಕೊಳ್ಳಲು ಮಾದರಿ ಪ್ರಾತ್ಯಕ್ಷತೆಗಳನ್ನು ಹಾಗೂ ತಾಂತ್ರಿಕತೆ ಪ್ರಸಾರ (Dissemination) ಮಾಡಲು ವಿವಿಧ ಕಾರ್ಯಕ್ರಮಗಳನ್ನು ಕೈಗೊಳ್ಳಲಾತ್ತಿದೆ.

ವಿವಿಧ ಹಣ್ಣಿನ ಗಿಡಗಳು, ತರಕಾರಿ ಗಿಡಗಳು, ಹೂವಿನ ಗಿಡಗಳು, ತೋಟದ ಬೆಳೆಗಳು, ಔಷದೀಯ ಹಾಗೂ ಸುಗಂಧಿತ ಬೆಳೆಗಳು, ಅಲಂಕಾರಿಕ ಗಿಡಗಳ ಸಸ್ಯಾಭಿವೃದ್ಧಿಯನ್ನು ಸಹ ಕೈಗೊಳ್ಳಲಾಗುತ್ತಿದೆ.

**ತೋಟಗಾರಿಕೆ ನರ್ಸರಿಗಳು:-**

ನರ್ಸರಿಗಳು ಅತೀ ಕಡಿಮೆ ವಿಸ್ತೀರ್ಣ ಹೊಂದಿರುತ್ತವೆ. ನರ್ಸರಿಗಳನ್ನು ಮುಖ್ಯವಾಗಿ ಸಸ್ಯಾಭಿವೃದ್ಧಿ ಉದ್ದೇಶಕ್ಕೆ ಅಭಿವೃದ್ಧಿಗೊಳಿಸಲಾಗಿರುತ್ತದೆ. ನರ್ಸರಿಗಳು ಸಾಮಾನ್ಯವಾಗಿ ನಗರ ಪ್ರದೇಶದಲ್ಲಿ ಅಥವಾ ನಗರಕ್ಕೆ ಹೊಂದಿಕೊಂಡಂತೆ ಇರುತ್ತವೆ.

ಸಸ್ಯೋತ್ಪಾದನೆ ಮೂಲಕ ಏಕ ವಾರ್ಷಿಕ /ಬಹುವಾರ್ಷಿಕ ವಿವಿಧ ಹಣ್ಣಿನ ಗಿಡಗಳು, ತರಕಾರಿ ಗಿಡಗಳು, ಹೂವಿನ ಗಿಡಗಳು, ತೋಟದ ಬೆಳೆಗಳು, ಔಷಧೀಯ ಮತ್ತು ಸುಗಂಧಿತ ಬೆಳೆಗಳು, ಅಲಂಕಾರಿಕ ಗಿಡಗಳು ಹಾಗೂ ಇತರೆ ತಳಿಗಳ ಸಸಿಗಳನ್ನು / ಕಸಿ ಗಿಡಗಳನ್ನು ಉತ್ಪಾದನೆ ಮಾಡಲಾಗುತ್ತಿದೆ. ಬೀಜೋತ್ಪಾದನೆ ಸಹ ಕೈಗೊಳ್ಳಲಾಗುತ್ತಿದೆ.

ನರ್ಸರಿಯಲ್ಲಿ ಸಸ್ಯಾಭಿವೃದ್ಧಿಗೆ ಅಗತ್ಯವಿರುವ ಮೂಲಭೂತ ಸೌಕರ್ಯಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ಉತ್ತಮ ಗುಣ ಮಟ್ಟದ ಸಸಿ/ಕಸಿಗಳನ್ನು ಸಸ್ಯೋತ್ಪಾದನೆ ಮೂಲಕ ಹೆಚ್ಚಿನ ಸಂಖ್ಯೆಯಲ್ಲಿ ಋತುವಾರು ಉತ್ಪಾದನೆ ಮಾಡಿ, ನಿರ್ದಿಷ್ಟ ಗುಣಮಟ್ಟಕ್ಕೆ ಬೆಳೆಸಿ ಸಾರ್ವಜನಿಕರಿಗೆ/ರೈತರಿಗೆ ನಿಗದಿತ ದರದಲ್ಲಿ ಮಾರಾಟ ಮಾಡಲಾಗುತ್ತಿದೆ.